**ದಿಃ 18.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು –ಎರಡನೇ ಎದುರುದಾರರ ಪರ ವಕೀಲರಿಂದಃ**

ನಾನು ಅಪಘಾತವನ್ನು ನೋಡಿರುವುದಿಲ್ಲ. ದೂರುದಾರರು ನನ್ನ ನಾದಿನಿಯ ಗಂಡ. ಆತ ಮೈಸೂರಿನ ನಿವಾಸಿ ಎನ್ನುವುದು ಸರಿ. ಅಪಘಾತವಾದ ಸ್ಥಳದಲ್ಲಿ ಆತ ಇರಲಿಲ್ಲ. 5 ನೇ ಅರ್ಜಿದಾರಳು ನನ್ನ ನಾದಿನಿ. ದೂರುದಾರರು ಆಕೆಯ ಗಂಡ. ನನ್ನ ನಾದಿನಿ ಕೂಡ ಮೈಸೂರಿನ ನಿವಾಸಿ ಎನ್ನುವುದು ಸರಿ .

1 ನೇ ಎದುರುದಾರರ ಪರಿಚಯ ಇರುವುದಿಲ್ಲ. ಆತ ಎಲ್ಲಿಯ ನಿವಾಸಿ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಪಘಾತವಾದ ದಿನ ಆ ವಾಹನದಲ್ಲಿ ಎಷ್ಟು ಜನ ಹೋಗುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಚಿಕ್ಕದೇವಮ್ಮನ ಬೆಟ್ಟಕ್ಕೆ ಹೋಗುವಾಗ ಅಪಘಾತವಾಯಿತು. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದರು. ಬಾರ್ ಬೈಂಡಿಂಗ್ ಕೆಲಸ ಮಾಡುತ್ತಿದ್ದರು. ಯಾವ ಸರಕು ಮತ್ತು ಯಾರಿಗೆ ಸೇರಿದ ಸರಕನ್ನು ತರಲು ಹೋಗುತ್ತಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಬಾರ್ ಬೈಂಡಿಂಗ್ ಕೆಲಸ ಎಂದರೆ ಕಬ್ಬಿಣದ ಕೆಲಸ ಎನ್ನುವುದು ಸರಿ . ನನ್ನ ಗಂಡ ತಿಂಗಳಿಗೆ ಈ ಕೆಲಸದಿಂದ ರೂ.25,000/– ದುಡಿಯುತ್ತಿದ್ದರು. ಅವರ ತಿಂಗಳ ದುಡಿಮೆಯ ಬಾಬ್ತು ನನ್ನಲ್ಲಿ ಲೆಕ್ಕ ಪತ್ರ ಇರುವುದಿಲ್ಲ.

ರವಿ ನನ್ನ ಗಂಡನ ಸ್ನೇಹಿತರು ಎನ್ನುವುದು ಸರಿ. ಅಪಘಾತವಾದ ದಿನ ಆ ವಾಹನದಲ್ಲಿ ಇದ್ದ ಎಲ್ಲರು ಸರಗೂರಿನಲ್ಲಿರುವ ಚಿಕ್ಕದೇವಮ್ಮನ ಬೆಟ್ಟಕ್ಕೆ ಹೋಗುತ್ತಿದ್ದರು ಎನ್ನುವುದು ಸರಿಯಲ್ಲ.

ವಾಹನ ಗೂಡ್ಸ್ ವಾಹನವಾಗಿದ್ದರಿಂದ , ಅದರಲ್ಲಿ ಸರಕು ತರಲು ಹೋಗುತ್ತಿದ್ದರು ಎಂದು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಅಪಘಾತ ವಾಹನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎನ್ನುವುದು ಸರಿಯಲ್ಲ. ಸದರಿ ವಾಹನ ವಿಮೆಗೆ ಒಳಪಟ್ಟಿರದೇ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರದ ಹಣವನ್ನು ಕೊಡಲು ಬಾಧ್ಯಸ್ಥರಾಗಿರುವುದಿಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.